ಸೂ. 34 | **31. ಲುಕ್ಮಾನ್** | ರು. 4

سورة لقمان مكية — آياتها ٣٤ — ركوعاتها ٤

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ

1. ಅಲಿಫ್ ಲಾಮ್ಮೀಮ್.

الٓمّٓ ﴿١﴾

2. ಇವು ಯುಕ್ತಿಪೂರ್ಣ ಗ್ರಂಥದ ಸೂಕ್ತಗಳು.[1]

تِلْكَ اٰيٰتُ الْكِتٰبِ الْحَكِيْمِ ﴿٢﴾

3. ಸದ್ಭಕ್ತರಿಗೆ ಮಾರ್ಗದರ್ಶನವೂ ಅನುಗ್ರಹವೂ ಆಗಿವೆ.

هُدًى وَّرَحْمَةً لِّلْمُحْسِنِيْنَ ﴿٣﴾

4. ಇವರು ನಮಾಝನ್ನು ಸಂಸ್ಥಾಪಿಸುವವರು ಝಕಾತ್ ಕೊಡುವವರು ಮತ್ತು ಪರಲೋಕದ ಮೇಲೆ ವಿಶ್ವಾಸವಿರಿಸುವವರಾಗಿದ್ದಾರೆ.

الَّذِيْنَ يُقِيْمُوْنَ الصَّلٰوةَ وَيُؤْتُوْنَ الزَّكٰوةَ وَهُمْ بِالْاٰخِرَةِ هُمْ يُوْقِنُوْنَ ﴿٤﴾

5. ಇವರೇ ತಮ್ಮ ಪ್ರಭುವಿನ ಕಡೆಯಿಂದ ಸನ್ಮಾರ್ಗದಲ್ಲಿದ್ದಾರೆ ಮತ್ತು ಇವರೇ ಯಶಸ್ಸು ಗಳಿಸುವವರಾಗಿದ್ದಾರೆ.

اُولٰٓئِكَ عَلٰى هُدًى مِّنْ رَّبِّهِمْ وَاُولٰٓئِكَ هُمُ الْمُفْلِحُوْنَ ﴿٥﴾

6. ಜನರಲ್ಲಿ ಒಬ್ಬನು, ಜನರನ್ನು ಅಲ್ಲಾಹನ ಮಾರ್ಗದಿಂದ ಜ್ಞಾನ ರಹಿತವಾಗಿ ದಾರಿಗೆಡಿಸಲಿಕ್ಕಾಗಿ ಮತ್ತು ಈ ಮಾರ್ಗದ ಕಡೆಗಿರುವ ಕರೆಯನ್ನು ತಮಾಷೆಯಲ್ಲಿ ಹಾರಿಸಿಬಿಡಲಿಕ್ಕಾಗಿ ಮನಮೋಹಕ ವಾಣಿಯನ್ನು[2] ಖರೀದಿಸಿ ತರುತ್ತಾನೆ. ಇಂತಹವರಿಗೆ ಬಹಳ ಅಪಮಾನಕರ ಯಾತನೆ ಇದೆ.

وَمِنَ النَّاسِ مَنْ يَّشْتَرِيْ لَهْوَ الْحَدِيْثِ لِيُضِلَّ عَنْ سَبِيْلِ اللّٰهِ بِغَيْرِ عِلْمٍ ۖ وَّيَتَّخِذَهَا هُزُوًا ۗ اُولٰٓئِكَ لَهُمْ عَذَابٌ مُّهِيْنٌ ﴿٦﴾

---

1. ಅರ್ಥಾತ್- ಜಾಣ್ಮೆಯಿಂದ ಸಂಪನ್ನವಾಗಿರುವ ಮತ್ತು ಪ್ರತಿಯೊಂದು ಮಾತಿನಲ್ಲೂ ಯುಕ್ತಿ ಅಡಕವಾಗಿರುವ ಗ್ರಂಥದ ಸೂಕ್ತಗಳು.
2. ಮೂಲದಲ್ಲಿ 'ಲಹ್ವಲ್ ಹದೀಸ್' ಎಂಬ ಪದ ಪ್ರಯೋಗವಾಗಿದೆ. ಅರ್ಥಾತ್, ಮಾನವನ ಗಮನ ಸೆಳೆದು ಇತರೆಲ್ಲ ವಸ್ತುಗಳಿಂದ ಅವನನ್ನು ವಿಮುಖಗೊಳಿಸುವಂತಹ ವಿಷಯ. ವರದಿಗಳಿಂದ ವ್ಯಕ್ತವಾಗುವಂತೆ ಕುರೈಶರ ಎಲ್ಲಾ ವಿಧದ ಪ್ರಯತ್ನಗಳ ಹೊರತಾಗಿಯೂ ಪ್ರವಾದಿವರ್ಯರ(ಸ) ಬೋಧನೆಯ ಪರಿಣಾಮ ವ್ಯಾಪಕವಾಗುತ್ತಾ ಹೋಗುವುದಕ್ಕೆ ಯಾವುದೇ ಅಡ್ಡಿಯಿರಲಿಲ್ಲ. ಆಗ ಅವರು ಇರಾನ್‌ನಿಂದ ರುಸ್ತುಮ್ ಮತ್ತು ಅಸ್ಫಂದಿಯಾರ್‌ನ ಕಥೆಗಳನ್ನು ತರಿಸಿ 'ಕಥಾಪ್ರಸಂಗ'ದ ಸರಣಿ ಆರಂಭಿಸಿದರು. ಡೋಲು ಬಾರಿಸುವ ಮತ್ತು ಹಾಡುವ ದಾಸಿಯರ ಏರ್ಪಾಟು ಮಾಡಿದರು. ಜನರು ಅವುಗಳಲ್ಲಿ ತಲ್ಲೀನರಾಗಿ ಪ್ರವಾದಿಯ ಮಾತು ಕೇಳದಿರಲಿ ಎಂಬುದೇ ಅವರ ಉದ್ದೇಶವಾಗಿತ್ತು.

7. ಅವನಿಗೆ ನಮ್ಮ ಸೂಕ್ತಗಳನ್ನು ಓದಿ ಕೇಳಿಸಲಾದಾಗ ಅವನು ಅವುಗಳನ್ನು ತಾನು ಕೇಳಲೇ ಇಲ್ಲವೋ ಎಂಬಂತೆ, ಅವನ ಕಿವಿಗಳು ಕಿವುಡೋ ಎಂಬಂತೆ ದುರಹಂಕಾರದಿಂದ ಮುಖ ತಿರುಗಿಸಿ ಬಿಡುತ್ತಾನೆ. ಅವನಿಗೆ ಒಂದು ವೇದನಾಯುಕ್ತ ಯಾತನೆಯ ಸುವಾರ್ತೆ ಕೊಟ್ಟು ಬಿಡಿರಿ.

وَإِذَا تُتْلَىٰ عَلَيْهِ آيَاتُنَا وَلَّىٰ مُسْتَكْبِرًا
كَأَن لَّمْ يَسْمَعْهَا كَأَنَّ فِي أُذُنَيْهِ
وَقْرًا ۖ فَبَشِّرْهُ بِعَذَابٍ أَلِيمٍ ﴿٧﴾

8. ಆದರೆ, ಸತ್ಯವಿಶ್ವಾಸ ಸ್ವೀಕರಿಸುವವರಿಗೂ ಸತ್ಕರ್ಮವೆಸಗುವವರಿಗೂ ಅನುಗ್ರಹಗಳು ತುಂಬಿದ ಸ್ವರ್ಗೋದ್ಯಾನಗಳಿವೆ.

إِنَّ الَّذِينَ آمَنُوا وَعَمِلُوا الصَّالِحَاتِ
لَهُمْ جَنَّاتُ النَّعِيمِ ﴿٨﴾

9. ಅವುಗಳಲ್ಲಿ ಅವರು ಸದಾ ಕಾಲ ವಾಸಿಸುವರು. ಇದು ಅಲ್ಲಾಹನ ದೃಢವಾದ ವಾಗ್ದಾನವಾಗಿದೆ ಮತ್ತು ಅವನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

خَالِدِينَ فِيهَا ۖ وَعْدَ اللَّهِ حَقًّا ۚ وَهُوَ
الْعَزِيزُ الْحَكِيمُ ﴿٩﴾

10. ಅವನು ನಿಮಗೆ ಕಾಣುವ ಸ್ತಂಭಗಳಿಲ್ಲದೆ ಆಕಾಶಗಳನ್ನು ಸೃಷ್ಟಿಸಿದನು. ಭೂಮಿಯು ನಿಮ್ಮ ಸಹಿತ ಉರುಳಿ ಬಿಡದಂತೆ ಅವನು ಅದರಲ್ಲಿ ಪರ್ವತಗಳನ್ನು ನಾಟಿದನು. ಅವನು ಎಲ್ಲ ತರದ ಪ್ರಾಣಿಗಳನ್ನು ಭೂಮಿಯಲ್ಲಿ ಹಬ್ಬಿಸಿಬಿಟ್ಟನು. ಆಕಾಶದಿಂದ ನೀರನ್ನು ಸುರಿಸಿದನು ಮತ್ತು ಭೂಮಿಯಲ್ಲಿ ತರತರದ ಉತ್ತಮ ವಸ್ತುಗಳನ್ನು ಮೊಳೆಯಿಸಿದನು.

خَلَقَ السَّمَاوَاتِ بِغَيْرِ عَمَدٍ تَرَوْنَهَا
وَأَلْقَىٰ فِي الْأَرْضِ رَوَاسِيَ أَن تَمِيدَ
بِكُمْ وَبَثَّ فِيهَا مِن كُلِّ دَابَّةٍ ۚ
وَأَنزَلْنَا مِنَ السَّمَاءِ مَاءً فَأَنبَتْنَا
فِيهَا مِن كُلِّ زَوْجٍ كَرِيمٍ ﴿١٠﴾

11. ಇದೆಲ್ಲಾ ಅಲ್ಲಾಹನ ಸೃಷ್ಟಿ. ಈಗ ಅವನ ಹೊರತು ಆ ಇತರರು ಏನನ್ನು ಸೃಷ್ಟಿಸಿದ್ದಾರೆಂಬುದನ್ನು ನನಗೆ ತೋರಿಸಿರಿ. ವಾಸ್ತವದಲ್ಲಿ ಈ ಅಕ್ರಮಿಗಳು ಸುವ್ಯಕ್ತ ಪಥಭ್ರಷ್ಟತೆಗೊಳಗಾಗಿದ್ದಾರೆ.

هَٰذَا خَلْقُ اللَّهِ فَأَرُونِي مَاذَا خَلَقَ
الَّذِينَ مِن دُونِهِ ۚ بَلِ الظَّالِمُونَ
فِي ضَلَالٍ مُّبِينٍ ﴿١١﴾

12. ಲುಕ್ಮಾನರು ಅಲ್ಲಾಹನಿಗೆ ಕೃತಜ್ಞರಾಗಲೆಂದು ನಾವು ಅವರಿಗೆ ಯುಕ್ತಿಯನ್ನು ದಯಪಾಲಿಸಿದೆವು. ಕೃತಜ್ಞನ ಕೃತಜ್ಞತೆಯು ಅವನ ಸ್ವಂತಕ್ಕೇ ಲಾಭದಾಯಕವಾಗಿದೆ ಮತ್ತು ಯಾರಾದರೂ ಧಿಕ್ಕರಿಸಿದರೆ ವಾಸ್ತವದಲ್ಲಿ ಅಲ್ಲಾಹನು ನಿರಪೇಕ್ಷನೂ ಸ್ವಯಂ ಸ್ತುತ್ಯರ್ಹನೂ ಆಗಿರುತ್ತಾನೆ.

وَلَقَدْ آتَيْنَا لُقْمَانَ الْحِكْمَةَ أَنِ اشْكُرْ
لِلَّهِ ۚ وَمَن يَشْكُرْ فَإِنَّمَا يَشْكُرُ لِنَفْسِهِ ۖ
وَمَن كَفَرَ فَإِنَّ اللَّهَ غَنِيٌّ حَمِيدٌ ﴿١٢﴾

13. ಲುಕ್ಮಾನರು ತಮ್ಮ ಪುತ್ರನಿಗೆ ಉಪದೇಶವೀಯುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ. ಅವರು, "ಮಗನೇ ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡಬೇಡ ನಿಜವಾಗಿಯೂ 'ಬಹುದೇವವಿಶ್ವಾಸ' ಮಹಾ ಅಕ್ರಮವಾಗಿದೆ" ಎಂದರು.

وَإِذْ قَالَ لُقْمَانُ لِابْنِهِ وَهُوَ يَعِظُهُ
يَا بُنَيَّ لَا تُشْرِكْ بِاللَّهِ ۖ إِنَّ الشِّرْكَ
لَظُلْمٌ عَظِيمٌ ﴿١٣﴾

14. ಮಾನವನಿಗೆ ತನ್ನ ಮಾತಾಪಿತರ ಹಕ್ಕನ್ನು ತಿಳಿದುಕೊಳ್ಳಲು ನಾವೇ ತಾಕೀತು ಮಾಡಿರುತ್ತೇವೆ. ಅವನ ತಾಯಿಯು ನಿತ್ರಾಣದ ಮೇಲೆ ನಿತ್ರಾಣವನ್ನು ಸಹಿಸಿ ಅವನನ್ನು ತನ್ನ ಗರ್ಭದಲ್ಲಿರಿಸಿದಳು ಮತ್ತು ಅವನ ಸ್ತನಪಾನ ಬಿಡುವುದರಲ್ಲಿ ಎರಡು ವರ್ಷಗಳು ತಗಲಿದುವು. (ಆದುದರಿಂದಲೇ ನಾವು ಅವನೊಡನೆ) ನನಗೆ ಕೃತಜ್ಞತೆ ಸಲ್ಲಿಸು ಮತ್ತು ನಿನ್ನ ಮಾತಾಪಿತರಿಗೆ ಕೃತಜ್ಞತೆ ಸಲ್ಲಿಸು. ನೀನು ನನ್ನ ಕಡೆಗೇ ಮರಳಬೇಕಾಗಿದೆ (ಎಂದು ಉಪದೇಶಿಸಿದೆವು).

وَوَصَّيْنَا الْإِنْسَانَ بِوَالِدَيْهِ حَمَلَتْهُ
أُمُّهُ وَهْنًا عَلَىٰ وَهْنٍ وَفِصَالُهُ فِي
عَامَيْنِ أَنِ اشْكُرْ لِي وَلِوَالِدَيْكَ
إِلَيَّ الْمَصِيرُ ١٤

15. ಆದರೆ, ಅವರು ನಿನಗೆ ತಿಳಿಯದುದನ್ನು[3] ನನ್ನೊಂದಿಗೆ ಸಹಭಾಗಿಯಾಗಿ ಮಾಡಬೇಕೆಂದು ನಿನ್ನ ಮೇಲೆ ಒತ್ತಡ ಹಾಕಿದರೆ ಅವರ ಮಾತನ್ನು ಎಷ್ಟು ಮಾತ್ರಕ್ಕೂ ಕೇಳಬೇಡ. ಈ ಲೋಕದಲ್ಲಿ ಅವರೊಂದಿಗೆ ಸದ್ವರ್ತನೆ ಮಾಡುತ್ತಿರು. ಆದರೆ, ಯಾರು ನನ್ನ ಕಡೆಗೆ ಒಲಿದಿರುವನೋ ಅವನ ಮಾರ್ಗವನ್ನು ಮಾತ್ರ ಅನುಸರಿಸು. ಮುಂದೆ ನಿಮಗೆಲ್ಲರಿಗೂ ನನ್ನ ಕಡೆಗೇ ಮರಳಲಿಕ್ಕಿದೆ. ಆಗ ನೀವು ಯಾವ ತರದ ಕರ್ಮಗಳನ್ನು ಮಾಡುತ್ತಿದ್ದಿರೆಂದು ನಾನು ನಿಮಗೆ ತೋರಿಸುವೆನು.

وَإِنْ جَاهَدَاكَ عَلَىٰ أَنْ تُشْرِكَ بِي مَا
لَيْسَ لَكَ بِهِ عِلْمٌ فَلَا تُطِعْهُمَا وَ
صَاحِبْهُمَا فِي الدُّنْيَا مَعْرُوفًا وَاتَّبِعْ
سَبِيلَ مَنْ أَنَابَ إِلَيَّ ثُمَّ إِلَيَّ مَرْجِعُكُمْ
فَأُنَبِّئُكُمْ بِمَا كُنْتُمْ تَعْمَلُونَ ١٥

16. (ಲುಕ್ಮಾನರು ಹೀಗೆಂದಿದ್ದರು) ಮಗನೇ! ಸಾಸಿವೆ ಕಾಳಿನಷ್ಟಿರುವ ಒಂದು ವಸ್ತುವೇ ಇರಲಿ ಅದು ಒಂದು ಬಂಡೆಯಲ್ಲಿ ಅಥವಾ ಆಕಾಶಗಳಲ್ಲಿ ಅಥವಾ ಭೂಮಿಯೊಳಗೆ ಎಲ್ಲಾದರೂ ಅಡಗಿರಲಿ ಅಲ್ಲಾಹನು ಅದನ್ನು ಹೊರ ತರುವನು. ಅವನು ಸೂಕ್ಷ್ಮದರ್ಶಿ ಮತ್ತು ವಿವರಪೂರ್ಣನಾಗಿರುತ್ತಾನೆ.

يَا بُنَيَّ إِنَّهَا إِنْ تَكُ مِثْقَالَ حَبَّةٍ مِنْ
خَرْدَلٍ فَتَكُنْ فِي صَخْرَةٍ أَوْ فِي السَّمَاوَاتِ
أَوْ فِي الْأَرْضِ يَأْتِ بِهَا اللَّهُ إِنَّ اللَّهَ
لَطِيفٌ خَبِيرٌ ١٦

17. ಮಗನೇ ನಮಾಝುನ್ನು ಸಂಸ್ಥಾಪಿಸು, ಒಳಿತಿನ ಆದೇಶ ಕೊಡು, ಕೆಡುಕಿನಿಂದ ತಡೆ ಮತ್ತು ಯಾವ ಕಷ್ಟವೇ ಬರಲಿ ಸಹನೆ ವಹಿಸು. ಇವು ಅತಿ ಹೆಚ್ಚು ತಾಕೀತು ಮಾಡಲ್ಪಟ್ಟ ವಿಷಯಗಳು.[4]

يَا بُنَيَّ أَقِمِ الصَّلَاةَ وَأْمُرْ بِالْمَعْرُوفِ
وَانْهَ عَنِ الْمُنْكَرِ وَاصْبِرْ عَلَىٰ مَا
أَصَابَكَ إِنَّ ذَٰلِكَ مِنْ عَزْمِ الْأُمُورِ ١٧

18. ಜನರೊಡನೆ ಮುಖ ತಿರುಗಿಸಿ ಮಾತಾಡಬೇಡ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡ, ದುರಭಿಮಾನ ಹಾಗೂ ಅಹಂಕಾರ ಪಡುವವನನ್ನು ಅಲ್ಲಾಹನು ಮೆಚ್ಚುವುದಿಲ್ಲ.

وَلَا تُصَعِّرْ خَدَّكَ لِلنَّاسِ وَلَا تَمْشِ
فِي الْأَرْضِ مَرَحًا إِنَّ اللَّهَ لَا يُحِبُّ
كُلَّ مُخْتَالٍ فَخُورٍ ١٨

19. ನಿನ್ನ ನಡೆಯಲ್ಲಿ ಇತಿಮಿತಿಯನ್ನಿರಿಸು. ನಿನ್ನ ಸ್ವರವನ್ನು ಸ್ವಲ್ಪ

وَاقْصِدْ فِي مَشْيِكَ وَاغْضُضْ مِنْ

3. ಅರ್ಥಾತ್- ನನ್ನ ಭಾಗೀದಾರರಲ್ಲವೆಂದು ನಿನಗೆ ತಿಳಿದಿರುವ.

4. ಇದರ ಇನ್ನೊಂದು ಅರ್ಥ ‘ಇದು ಬಹಳ ಧೈರ್ಯದ ಕೆಲಸವಾಗಿದೆ’ ಎಂದೂ ಆಗಬಹುದು.

ತಗ್ಗಿಸು. ಎಲ್ಲ ಸ್ವರಗಳಿಗಿಂತ ಕೆಟ್ಟ ಸ್ವರವು ಕತ್ತೆಯ ಸ್ವರ ವಾಗಿರುತ್ತದೆ.

صَوْتِكَ ۚ إِنَّ أَنكَرَ الْأَصْوَاتِ
لَصَوْتُ الْحَمِيرِ ﴿١٩﴾

20. ಅಲ್ಲಾಹನು ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಸಕಲ ವಸ್ತುಗಳನ್ನು ನಿಮಗೆ ಅಧೀನಗೊಳಿಸಿರುವುದನ್ನೂ[5] ತನ್ನ ಪ್ರತ್ಯಕ್ಷ ಹಾಗೂ ರಹಸ್ಯ ಅನುಗ್ರಹಗಳನ್ನು ನಿಮಗೆ ಪೂರ್ತಿಗೊಳಿಸಿ ಕೊಟ್ಟಿರುವುದನ್ನೂ ನೀವು ನೋಡುತ್ತಿಲ್ಲವೇ? ಹೀಗಿದ್ದೂ ಮಾನವ ರಲ್ಲಿ ಕೆಲವರು ತಮ್ಮ ಬಳಿ ಯಾವುದೇ ಜ್ಞಾನವಾಗಲಿ, ಸನ್ಮಾರ್ಗ ದರ್ಶನವಾಗಲಿ ಬೆಳಕು ತೋರಿಸುವ ಯಾವುದಾದರೂ ಗ್ರಂಥ ವಾಗಲಿ ಇಲ್ಲದೆ ಅಲ್ಲಾಹನ ವಿಷಯದಲ್ಲಿ ಜಗಳಾಡುತ್ತಾರೆ.

أَلَمْ تَرَوْا أَنَّ اللَّهَ سَخَّرَ لَكُم مَّا
فِي السَّمَاوَاتِ وَمَا فِي الْأَرْضِ وَأَسْبَغَ
عَلَيْكُمْ نِعَمَهُ ظَاهِرَةً وَبَاطِنَةً ۗ وَمِنَ
النَّاسِ مَن يُجَادِلُ فِي اللَّهِ بِغَيْرِ عِلْمٍ
وَلَا هُدًى وَلَا كِتَابٍ مُّنِيرٍ ﴿٢٠﴾

21. ಅಲ್ಲಾಹನು ಅವತೀರ್ಣಗೊಳಿಸಿರುವುದನ್ನು ಅನುಸರಿಸಿರೆಂದು ಅವರೊಡನೆ ಹೇಳಲಾದಾಗ ಅವರು- "ನಾವು ನಮ್ಮ ಪೂರ್ವಜರನ್ನು ಯಾವುದರಲ್ಲಿ ಕಂಡಿದ್ದೇವೋ ಅದನ್ನೇ ಅನುಸರಿಸುವೆವು" ಎನ್ನುತ್ತಾರೆ. ಶೈತಾನನು ಅವರನ್ನು ಧಗಧಗಿಸುವ ಅಗ್ನಿಯ ಕಡೆಗೇ ಕರೆಯುತ್ತಿದ್ದರೂ ಇವರು ಅವರನ್ನೇ ಅನುಸರಿಸುವರೇ?

وَإِذَا قِيلَ لَهُمُ اتَّبِعُوا مَا أَنزَلَ اللَّهُ
قَالُوا بَلْ نَتَّبِعُ مَا وَجَدْنَا عَلَيْهِ
آبَاءَنَا ۚ أَوَلَوْ كَانَ الشَّيْطَانُ يَدْعُوهُمْ
إِلَىٰ عَذَابِ السَّعِيرِ ﴿٢١﴾

22. ತನ್ನನ್ನು ಅಲ್ಲಾಹನಿಗೆ ಅರ್ಪಿಸಿಕೊಂಡು ಕಾರ್ಯತಃ ಸತ್ಕರ್ಮಿಯೂ ಆದವನು ವಾಸ್ತವದಲ್ಲಿ ಭರವಸೆಗೆ ಯೋಗ್ಯವಾದ ಒಂದು ಆಧಾರವನ್ನು ಬಿಗಿ ಹಿಡಿದುಕೊಂಡನು. ಸಕಲ ವಿಷಯಗಳ ಅಂತಿಮ ತೀರ್ಮಾನವು ಅಲ್ಲಾಹನ ಕೈಯಲ್ಲೇ ಇದೆ.

وَمَن يُسْلِمْ وَجْهَهُ إِلَى اللَّهِ وَهُوَ
مُحْسِنٌ فَقَدِ اسْتَمْسَكَ بِالْعُرْوَةِ
الْوُثْقَىٰ ۗ وَإِلَى اللَّهِ عَاقِبَةُ الْأُمُورِ ﴿٢٢﴾

23. ಸತ್ಯವನ್ನು ನಿಷೇಧಿಸುವವನ ನಿಷೇಧವು ನಿಮ್ಮನ್ನು ವ್ಯಥೆಗೀಡು ಮಾಡದಿರಲಿ. ಅವರಿಗೆ ಮರಳಿ ಬರಬೇಕಾದುದಂತೂ ನಮ್ಮ ಕಡೆಗೇ ಆಗಿದೆ. ಅನಂತರ ಅವರು ಏನೆಲ್ಲ ಮಾಡಿ ಬಂದಿರುವ ರೆಂದು ನಾವು ಅವರಿಗೆ ತೋರಿಸುವೆವು. ನಿಶ್ಚಯವಾಗಿಯೂ ಅಲ್ಲಾಹನು ಹೃದಯಗಳೊಳಗೆ ಅವಿತಿರುವ ರಹಸ್ಯಗಳನ್ನೂ ತಿಳಿದಿರುತ್ತಾನೆ.

وَمَن كَفَرَ فَلَا يَحْزُنكَ كُفْرُهُ ۚ إِلَيْنَا
مَرْجِعُهُمْ فَنُنَبِّئُهُم بِمَا عَمِلُوا ۚ إِنَّ
اللَّهَ عَلِيمٌ بِذَاتِ الصُّدُورِ ﴿٢٣﴾

5. ಯಾವುದಾದರೂ ವಸ್ತುವನ್ನು ಎರಡು ರೀತಿಯಲ್ಲಿ ಒಬ್ಬನ ಅಧೀನಗೊಳಿಸಬಹುದು. ಒಂದನೆಯದಾಗಿ ಅದನ್ನು ಅವನಿಗೊಪ್ಪಿಸುವುದು. ಅದನ್ನು ಯಾವ ರೀತಿ ಬೇಕಾದರೂ ವ್ಯಯಿಸುವ ಮತ್ತು ಹೇಗೆ ಬೇಕಾದರೂ ಉಪಯೋಗಿಸುವ ಸ್ವಾತಂತ್ರ್ಯ ನೀಡುವುದು. ಎರಡನೆಯದಾಗಿ ಆ ವಸ್ತುವನ್ನು ನಿರ್ದಿಷ್ಟ ನಿಯಮಗಳಿಗೆ ಬದ್ಧಗೊಳಿಸುವುದು. ಅದರಿಂದಾಗಿ ಅದು ಆ ವ್ಯಕ್ತಿಗೆ ಫಲಪ್ರದವಾಗಿ ಮಾರ್ಪಡಬೇಕು. ಅವನ ಹಿತಕ್ಕಾಗಿ ಅದು ಕಾರ್ಯೋನ್ಮುಖವಾಗಿರಬೇಕು. ಭೂಮಿ-ಆಕಾಶಗಳ ಎಲ್ಲಾ ವಸ್ತುಗಳನ್ನು ಅಲ್ಲಾಹನು ಒಂದೇ ಅರ್ಥದಲ್ಲಿ ಮಾನವನಿಗೆ ಅಧೀನಗೊಳಿಸಿಲ್ಲ. ಕೆಲವನ್ನು ಮೊದಲನೆಯ ಅರ್ಥದಲ್ಲಿ ಅಧೀನಗೊಳಿಸಿದ್ದರೆ ಮತ್ತೆ ಕೆಲವನ್ನು ಎರಡನೆಯ ಅರ್ಥದಲ್ಲಿ ಅಧೀನಗೊಳಿಸಿದ್ದಾನೆ. ಉದಾ: ನೀರು, ಗಾಳಿ, ಮಣ್ಣು, ಬೆಂಕಿ, ಸಸ್ಯಗಳು, ಖನಿಜ ವಸ್ತುಗಳು, ಜಾನುವಾರುಗಳು ಇತ್ಯಾದಿ ಅಸಂಖ್ಯ ವಸ್ತುಗಳು ಮೊದಲನೆಯ ಅರ್ಥದಲ್ಲಿ ಮಾನವನಿಗೆ ಅಧೀನವಾಗಿವೆ. ಸೂರ್ಯ-ಚಂದ್ರಗಳೆಲ್ಲವೂ ಎರಡನೆಯ ಅರ್ಥದಲ್ಲಿ ಮಾನವನಿಗೆ ಅಧೀನವಾಗಿವೆ.

24. ನಾವು ಅವರಿಗೆ ಸ್ವಲ್ಪ ಕಾಲ ಭೂಮಿಯಲ್ಲಿ ಸುಖಪಡುವ ಅವಕಾಶ ನೀಡುತ್ತಿದ್ದೇವೆ. ಆ ಬಳಿಕ ಅವರನ್ನು ವಿವಶರನ್ನಾಗಿ ಮಾಡಿ, ಒಂದು ಕಠಿಣ ಯಾತನೆಯ ಕಡೆಗೆ ಎಳೆದೊಯ್ಯುವೆವು.

نمتعهم قليلا ثم نضطرهم إلى
عذاب غليظ ﴿٢٤﴾

25. ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿದವರು ಯಾರು ಎಂದು ನೀವು ಇವರೊಡನೆ ಕೇಳಿದಾಗ, ಇವರು ಅಲ್ಲಾಹನೆಂದೇ ಹೇಳುವರು. 'ಅಲ್‌ಹಮ್ದುಲಿಲ್ಲಾಹ್' (ಅಲ್ಲಾಹನಿಗೆ ಸ್ತುತಿ) ಎನ್ನಿರಿ. ಆದರೆ ಇವರಲ್ಲಿ ಹೆಚ್ಚಿನವರು ತಿಳಿಯುವುದಿಲ್ಲ.

ولئن سألتهم من خلق السماوات
والأرض ليقولن الله ۚ قل الحمد
لله ۚ بل أكثرهم لا يعلمون ﴿٢٥﴾

26. ಆಕಾಶಗಳಲ್ಲೂ ಭೂಮಿಯಲ್ಲೂ ಇರುವುದೆಲ್ಲವೂ ಅಲ್ಲಾಹನದು. ನಿಶ್ಚಯವಾಗಿಯೂ ಅಲ್ಲಾಹನು ನಿರಪೇಕ್ಷನೂ ಸ್ವಯಂ ಸ್ತುತ್ಯರ್ಹನೂ ಆಗಿರುತ್ತಾನೆ.

لله ما في السماوات والأرض ۚ إن
الله هو الغني الحميد ﴿٢٦﴾

27. ಭೂಮಿಯಲ್ಲಿರುವ ಮರಗಳೆಲ್ಲ ಲೇಖನಿಗಳಾಗಿ ಮಾರ್ಪಟ್ಟು ಸಾಗರವು (ಮಸಿಯಾಗಿ) ಅದಕ್ಕೆ ಇನ್ನೂ ಸಪ್ತ ಸಾಗರಗಳು ಮಸಿಯನ್ನು ಒದಗಿಸಿದರೂ ಅಲ್ಲಾಹನ ವಚನಗಳು (ಬರೆದು) ತೀರಲಾರವು.[6] ನಿಶ್ಚಯವಾಗಿಯೂ ಅಲ್ಲಾಹನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

ولو أنما في الأرض من شجرة
أقلام والبحر يمده من بعده
سبعة أبحر ما نفدت كلمات
الله ۗ إن الله عزيز حكيم ﴿٢٧﴾

28. ನಿಮ್ಮೆಲ್ಲರನ್ನು ಸೃಷ್ಟಿಸುವುದೂ ಅನಂತರ ಪುನಃ ಜೀವಂತಗೊಳಿಸಿ ಎಬ್ಬಿಸುವುದೂ(ಅವನ ಮಟ್ಟಿಗೆ) ಕೇವಲ ಒಂದು ಜೀವಿಯ(ನ್ನು ಸೃಷ್ಟಿಸುವ ಮತ್ತು ಪುನಃ ಜೀವಂತ ಗೊಳಿಸುವ) ಹಾಗಿದೆ. ನಿಜವಾಗಿಯೂ ಅಲ್ಲಾಹನು ಸರ್ವಶ್ರುತನೂ ಸರ್ವ ವೀಕ್ಷಕನೂ ಆಗಿರುತ್ತಾನೆ.

ما خلقكم ولا بعثكم إلا كنفس
واحدة ۗ إن الله سميع بصير ﴿٢٨﴾

29. ಅಲ್ಲಾಹನು ಇರುಳನ್ನು ಹಗಲಿನೊಳಗೂ ಹಗಲನ್ನು ಇರುಳಿನೊಳಗೂ ಪೋಣಿಸುತ್ತ ತರುವುದನ್ನು ನೀವು ನೋಡುವುದಿಲ್ಲವೇ? ಅವನು ಸೂರ್ಯ-ಚಂದ್ರರನ್ನು ನಿಯಂತ್ರಿಸಿಟ್ಟಿರುತ್ತಾನೆ. ಎಲ್ಲವೂ ಒಂದು ನಿಶ್ಚಿತ ಕಾಲದ ವರೆಗೆ ಚಲಿಸುತ್ತಿರುತ್ತವೆ[7]

ألم تر أن الله يولج الليل في النهار
ويولج النهار في الليل وسخر الشمس
والقمر كل يجري إلى أجل مسمى

6. ಅಲ್ ಕಹ್ಫ್ ಅಧ್ಯಾಯದ 109ನೆಯ ಸೂಕ್ತದಲ್ಲಿ ಇದೇ ವಿಷಯವನ್ನು ಸ್ವಲ್ಪ ಭಿನ್ನ ರೂಪದಲ್ಲಿ ವಿವರಿಸಲಾಗಿದೆ. ಇಷ್ಟು ದೊಡ್ಡ ನಿಸರ್ಗವನ್ನು ಸೃಷ್ಟಿಸಿರುವ ದೇವನ ಸಾಮರ್ಥ್ಯ ಮತ್ತು ಚಮತ್ಕಾರಗಳು ನಿಸ್ಸೀಮವಾದುದು. ಹಾಗಿರುವಾಗ ಅವನ ದೇವತ್ವದಲ್ಲಿ ಯಾವುದೇ ಸೃಷ್ಟಿ ಸಹಭಾಗಿಯಾಗುವುದಾದರೂ ಹೇಗೆ ಎಂಬ ಕಲ್ಪನೆಯನ್ನು ಮೂಡಿಸುವುದು ಇದರ ಉದ್ದೇಶ.

7. ಇಲ್ಲಿ ಪ್ರತಿಯೊಂದು ವಸ್ತುವಿಗೂ ಗೊತ್ತುಪಡಿಸಲಾಗಿರುವ ಜೀವಿತಾವಧಿಯ ತನಕ ಅದು ನಡೆಯುತ್ತಿರುತ್ತದೆ. ಯಾವುದೇ ವಸ್ತು ಅನಾದಿಯೂ ಅಲ್ಲ ಅನಂತವೂ ಅಲ್ಲ.

ಮತ್ತು ನೀವು ಮಾಡುತ್ತಿರುವುದೆಲ್ಲವನ್ನೂ ಅಲ್ಲಾಹನು ವಿವರವಾಗಿ ತಿಳಿದಿರುತ್ತಾನೆ (ಎಂದು ನಿಮಗೆ ಗೊತ್ತಿಲ್ಲವೇ?).

وَأَنَّ اللَّهَ بِمَا تَعْمَلُونَ خَبِيرٌ ٢٩

30. ಇದಕ್ಕೆಲ್ಲಾ ಕಾರಣವೇನೆಂದರೆ ಅಲ್ಲಾಹನೇ ಸತ್ಯವಾಗಿದ್ದಾನೆ ಮತ್ತು ಅವನನ್ನು ಬಿಟ್ಟು ಇವರು ಪ್ರಾರ್ಥಿಸುತ್ತಿರುವ ಇತರ ಎಲ್ಲವೂ ಮಿಥ್ಯವಾಗಿದೆ. ಅಲ್ಲಾಹನೇ ಮಹೋನ್ನತ ಹಾಗೂ ಮಹಾನನಾಗಿರುತ್ತಾನೆ.

ذَٰلِكَ بِأَنَّ اللَّهَ هُوَ الْحَقُّ وَأَنَّ مَا
يَدْعُونَ مِن دُونِهِ الْبَاطِلُ وَأَنَّ
اللَّهَ هُوَ الْعَلِيُّ الْكَبِيرُ ٣٠

31. ನಿಮಗೆ ಕೆಲವು ನಿದರ್ಶನಗಳನ್ನು ತೋರಿಸಿ ಕೊಡಲಿಕ್ಕಾಗಿ ನಾವೆಯು ಸಮುದ್ರದಲ್ಲಿ ಅಲ್ಲಾಹನ ಅನುಗ್ರಹದಿಂದ ಚಲಿಸುತ್ತಿರುವುದನ್ನು ನೀವು ನೋಡುವುದಿಲ್ಲವೇ? ವಾಸ್ತವದಲ್ಲಿ ಸಹನಶೀಲನೂ ಕೃತಜ್ಞನೂ ಆಗಿರುವ ಪ್ರತಿಯೊಬ್ಬನಿಗೂ ಇದರಲ್ಲಿ ಅನೇಕ ದೃಷ್ಟಾಂತಗಳಿವೆ.

أَلَمْ تَرَ أَنَّ الْفُلْكَ تَجْرِي فِي الْبَحْرِ
بِنِعْمَتِ اللَّهِ لِيُرِيَكُم مِّنْ آيَاتِهِ ۚ إِنَّ
فِي ذَٰلِكَ لَآيَاتٍ لِّكُلِّ صَبَّارٍ شَكُورٍ ٣١

32. (ಸಮುದ್ರದಲ್ಲಿ) ಒಂದು ಅಲೆಯು ಇವರ ಮೇಲೆ ಚಪ್ಪರದಂತೆ ಆವರಿಸಿದಾಗ ಇವರು ತಮ್ಮ ಧರ್ಮವನ್ನು ಸಂಪೂರ್ಣವಾಗಿ ಅಲ್ಲಾಹನಿಗೇ ಮೀಸಲಾಗಿಸಿ ಅವನನ್ನು ಪ್ರಾರ್ಥಿಸುತ್ತಾರೆ. ತರುವಾಯ ಅವನು ಇವರನ್ನು ರಕ್ಷಿಸಿ ದಡದ ವರೆಗೆ ತಲಪಿಸಿದಾಗ ಅವರಲ್ಲೊಬ್ಬನು ಸುಮಧ್ಯ ನೀತಿಯನ್ನನುಸರಿಸುತ್ತಾನೆ[8] ಮತ್ತು ನಮ್ಮ ದೃಷ್ಟಾಂತಗಳನ್ನು ನಿಷೇಧಿಸುವುದಿಲ್ಲ. ಆದರೆ ವಿದ್ರೋಹಿ ಮತ್ತು ಕೃತಘ್ನರು ಇದಕ್ಕೆ ಹೊರತಾಗಿದ್ದಾರೆ.

وَإِذَا غَشِيَهُم مَّوْجٌ كَالظُّلَلِ دَعَوُا
اللَّهَ مُخْلِصِينَ لَهُ الدِّينَ فَلَمَّا
نَجَّاهُمْ إِلَى الْبَرِّ فَمِنْهُم مُّقْتَصِدٌ ۚ
وَمَا يَجْحَدُ بِآيَاتِنَا إِلَّا كُلُّ خَتَّارٍ كَفُورٍ ٣٢

33. ಜನರೇ, ನಿಮ್ಮ ಪ್ರಭುವಿನ ಕ್ರೋಧದಿಂದ ತಪ್ಪಿಸಿಕೊಳ್ಳಿರಿ ಮತ್ತು ಯಾವ ತಂದೆಯೂ ತನ್ನ ಮಗನ ಪರವಾಗಿ ಪರಿಹಾರ ಕೊಡದ ಮತ್ತು ಯಾವ ಮಗನೂ ತನ್ನ ತಂದೆಯ ಪರವಾಗಿ ಯಾವುದೇ ಪರಿಹಾರ ಕೊಡದ ದಿನವನ್ನು ಭಯಪಡಿರಿ. ನಿಶ್ಚಯವಾಗಿಯೂ ಅಲ್ಲಾಹನ ವಾಗ್ದಾನವು[9] ಸತ್ಯವಾಗಿದೆ. ಆದುದರಿಂದ ಈ ಲೌಕಿಕ ಜೀವನವು ನಿಮ್ಮನ್ನು ವಂಚನೆ ಗೊಳಪಡಿಸದಿರಲಿ ಮತ್ತು ವಂಚಕನು ನಿಮ್ಮನ್ನು ಅಲ್ಲಾಹನ ವಿಷಯದಲ್ಲಿ ವಂಚಿಸದಿರಲಿ.

يَا أَيُّهَا النَّاسُ اتَّقُوا رَبَّكُمْ وَاخْشَوْا يَوْمًا
لَّا يَجْزِي وَالِدٌ عَن وَلَدِهِ وَلَا مَوْلُودٌ
هُوَ جَازٍ عَن وَالِدِهِ شَيْئًا ۚ إِنَّ وَعْدَ
اللَّهِ حَقٌّ ۖ فَلَا تَغُرَّنَّكُمُ الْحَيَاةُ الدُّنْيَا
وَلَا يَغُرَّنَّكُم بِاللَّهِ الْغَرُورُ ٣٣

8. ಇದಕ್ಕೆ ಎರಡು ಅರ್ಥಗಳಿರಲು ಸಾಧ್ಯ. 'ಇಕ್‌ತಿಸಾದ್' ಪದವನ್ನು ಸನ್ಮಾರ್ಗದ ಅನುಸರಣೆ ಎಂದು ಅರ್ಥೈಸುವುದಾದರೆ ಅವರಲ್ಲಿ ಕೆಲವರು ಕಾಲ ಕಳೆದ ನಂತರವೂ ಏಕದೇವತ್ವದಲ್ಲಿ ಸ್ಥಿರವಾಗಿರುತ್ತಾರೆ ಎಂದಾಗುತ್ತದೆ. ಅದನ್ನು 'ಸುಮಧ್ಯತೆ' ಮತ್ತು 'ಸಮತೋಲನ' ಎಂದು ಅರ್ಥೈಸುವುದಾದರೆ ಅದರ ಅರ್ಥ ಕೆಲವರು ತಮ್ಮ ಬಹುದೇವಾರಾಧನೆ ಮತ್ತು ನಾಸ್ತಿಕತೆಯಲ್ಲಿ ದೃಢವಾಗಿ ನೆಲೆ ನಿಲ್ಲುವುದಿಲ್ಲ ಅಥವಾ ಕೆಲವರಲ್ಲಿ ಮೊದಲು ಹುಟ್ಟಿದಂತಹ ನಿಷ್ಠೆಯು ತಣ್ಣಗಾಗಿ ಬಿಡುತ್ತದೆ ಎಂದಾಗುತ್ತದೆ.

9. ಅರ್ಥಾತ್- ನಿರ್ಣಾಯಕ ದಿನದ ವಾಗ್ದಾನ.

إِنَّ اللَّهَ عِندَهُ عِلْمُ السَّاعَةِ وَيُنَزِّلُ
الْغَيْثَ وَيَعْلَمُ مَا فِي الْأَرْحَامِ ۖ
وَمَا تَدْرِي نَفْسٌ مَّاذَا تَكْسِبُ غَدًا ۖ
وَمَا تَدْرِي نَفْسٌ بِأَيِّ أَرْضٍ
تَمُوتُ ۚ إِنَّ اللَّهَ عَلِيمٌ خَبِيرٌ ﴿٣٤﴾ ع ٤ ١٣

34. ಆ ಘಳಿಗೆಯ ಜ್ಞಾನ ಅಲ್ಲಾಹನ ಬಳಿಯಲ್ಲೇ ಇದೆ. ಅವನೇ ಮಳೆ ಸುರಿಸುತ್ತಾನೆ. ತಾಯಂದಿರ ಗರ್ಭಗಳಲ್ಲಿ ಬೆಳೆಯುತ್ತಿರುವುದೇನೆಂಬುದನ್ನು ಅವನೇ ಬಲ್ಲನು. ಯಾವ ಜೀವಿಯೂ ತಾನು ನಾಳೆ ಏನನ್ನು ಗಳಿಸುವೆನು ಎಂಬುದನ್ನು ತಿಳಿದಿರುವುದಿಲ್ಲ ಮತ್ತು ತನಗೆ ಯಾವ ಭೂಭಾಗದಲ್ಲಿ ಮರಣ ಬರುವುದೆಂಬ ಅರಿವು ಯಾರಿಗೂ ಇಲ್ಲ. ನಿಶ್ಚಯವಾಗಿಯೂ ಅಲ್ಲಾಹನೇ ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ.